(ಇ) ಈ ರೀತಿ ಒದಗಿಸಿದ ಆಹಾರ ಪದಾರ್ಥಗಳ ಪೈಕಿ ಹಾಳಾಗಿರುವ ಮತ್ತು ಹಾಳಾಗಿದೆ ಎಂದು ನಾಶಪಡಿಸಿದ ಆಹಾರ ಪದಾರ್ಥಗಳ ಪ್ರಮಾಣ ಎಷ್ಟು.

(ಈ) ಕೆಲವೊಂದು ಸಂದರ್ಭದಲ್ಲಿ ಹಾಳಾದ ಗೋಧಿ ಮತ್ತು ರವೆ ಸರಬರಾಜು ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಮಲ್ಲಿಕಾರ್ಜುನ್ ಖಾರ್ಗೆ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

(ಅ) 1972-73, 1973-74 ಮತ್ತು 75ನೇ ಸಾಲಿನಲ್ಲಿ ಸಂಯುಕ್ತ ರಾಜ್ಯ ಸಂಸ್ಥೆಯಿಂದ ರಾಜ್ಯದಲ್ಲಿರುವ ಶಾಲಾ ಮಕ್ಕಳಿಗೆ ಮತ್ತು ಇತರರಿಗೆ ಹಂಚಲು ಕೊಟ್ಟ ಆಹಾರ ಮತ್ತು ವಸ್ತುಗಳ ಪ್ರಮಾಣವನ್ನು ಲಗತ್ತಿಸಿರುವ ಪಟ್ಟಿಯ ಕಾಲಂ 1ರಿಂದ 11ರಲ್ಲಿ ನಮೂದಿಸಲಾಗಿದೆ.

(ಆ) ಈ ಸಂಬಂಧ ವಿವರಗಳನ್ನು ವಿಧಾನಸಭೆಯ ಗ್ರಂಥಾಲಯದಲ್ಲಿಡಲಾಗಿದೆ. ಪಟ್ಟಿಯ ಕಾಲಂ 12ರಿಂದ 20ರಲ್ಲಿ ನಮೂದಿಸಲಾಗಿದೆ.

(ಇ) ಈ ಸಂಬಂಧ ವಿವರಗಳನ್ನು ವಿಧಾನಸಭೆಯ ಗ್ರಂಥಾಲಯದಲ್ಲಿಡಲಾಗಿದೆ. ಪಟ್ಟಿಯ ಕಾಲಂ 21ರಿಂದ 38ರಲ್ಲಿ ನಮೂದಿಸಲಾಗಿದೆ.

(ಈ) ಇಲ್ಲ.

ರಾಜ್ಯದ ಸಹಕಾರ ಸಂಘ ಹಾಗೂ ಸಹಕಾರ ಬ್ಯಾಂಕುಗಳಲ್ಲಿ ದುರುಪಯೋಗವಾಗಿರುವ ಹಣ

66. ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸಹಕಾರ ಮಂತ್ರಿಗಳು ಈ ವಿಷಯಗಳಲ್ಲಿ ದಯವಿಟ್ಟು ತಿಳಿಸುವರೆ;—

(ಅ) ರಾಜ್ಯದ ವಿವಿಧ ಎಲ್ಲಾ ಸಹಕಾರ ಸಂಘ ಹಾಗೂ ಸಹಕಾರ ಬ್ಯಾಂಕುಗಳಲ್ಲಿ 1972-73, 1973-74 ಹಾಗೂ 1974-75ರಲ್ಲಿ ದುರುಪಯೋಗವಾಗಿರುವ ಹಣದ ಮೊತ್ತವೆಷ್ಟು ? ಹಾಗೂ ಎಷ್ಟು ಪ್ರಕರಣಗಳಲ್ಲಿ ಹಣದ ವಸೂಲಾತಿ ನಡೆದಿದೆ;

(ಆ) ಎಷ್ಟು ಪ್ರಕರಣಗಳಲ್ಲಿ ಕೇಸುಗಳನ್ನು ದಾಖಲೆ ಮಾಡಿಕೊಂಡಿರುತ್ತೆ;

(ಇ) ಇನ್ನು ಮುಂದೆ ಹಣ ದುರುಪಯೋಗವಾಗದಂತೆ ತಡೆಯಲು ಸರಕಾರ ಕೈಗೊಂಡಿರುವ ಕ್ರಮಗಳಾವುವು?

ಶ್ರೀ ಕೆ. ಎಚ್. ರಂಗನಾಥ್ (ಸಹಕಾರ ಮಂತ್ರಿಗಳು).—

(ಅ) 81, 43, 178-13 ರೂ.ಗಳು 225 ಪ್ರಕರಣಗಳಲ್ಲಿ ವಸೂಲಾತಿ ನಡೆದಿದೆ. ವಸೂಲಾದ ಹಣ ರೂ. 12, 47, 842-06.

(ಆ) 647.

(ಇ) (1) ಸಕಾಲದಲ್ಲಿ ಕ್ರಮವಾಗಿ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ತನಿಖೆ ಮಾಡಲು ಮತ್ತು ವರ್ಷಾಂತ್ಯದಲ್ಲಿ ನಗದು ಹಾಗೂ ಸ್ಟಾಕನ್ನು ಪರಿಶೋಧನೆ ಮಾಡಲು ಆಡಿಟ್ ಇಲಾಖೆಯನ್ನು ಏರ್ಪಡಿಸಲಾಗಿರುತ್ತೆ.

(2) ಸಹಕಾರಿ ಹಾಗೂ ಪೋಲೀಸ್ ಇಲಾಖೆಗಳ ಸಮನ್ವಯ ಕಾರ್ಯಕ್ರಮಗಳಿಂದ ಸಹಕಾರಿ ಸಂಘಗಳಲ್ಲಿ ಹಣ ದುರುಪಯೋಗವಾದಂಥ ಪ್ರಕರಣಗಳನ್ನು ತೀವ್ರಗತಿಯಲ್ಲಿ ಪರಿಶೀಲಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.